# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 239 |
| ಸದಸ್ಯರ ಹೆಸರು | : | ಶ್ರೀ ಬಸನಗೌಡ ಬಾದರ್ಲಿ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾಗಿದ ದಿನಾಂಕ | : | 12-08-2025 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸಿಂಧನೂರು ನಗರದಿಂದ 15 ಕಿ.ಮೀ ದೂರದಲ್ಲಿರುವ ತುರುವಹಾಳ ಗ್ರಾಮದ ವ್ಯಾಪ್ತಿಯಲ್ಲಿ 251 ಎಕರೆಯ ಬೃಹತ್ ಕೆರೆ ಇದ್ದು, ಈಗಾಗಲೇ 24/7 ಕುಡಿಯುವ ನೀರಿನ ಯೋಜನೆ ಚಾಲ್ತಿಯಲ್ಲಿದ್ದರೂ ಸಹ ಸಿಂಧನೂರು ನಗರಕ್ಕೆ ಐದು ದಿನಗಳಿಗೊಮ್ಮೆ ನೀರು ಪೂರೈಸಲಾಗುತ್ತಿದ್ದು, ಸಮರ್ಪಕವಾಗಿ ನೀರಿನ ಪೂರೈಕೆಯಾಗುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ (ಕೆ.ಯು.ಐ.ಡಿ.ಎಫ್.ಸಿ) ವತಿಯಿಂದ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮ (ಎನ್‌ಕೆಯುಎಸ್‌ಐಪಿ) ಯೋಜನೆಯಡಿ ಸಿಂಧನೂರು ನಗರದಲ್ಲಿ 24x7 ಕುಡಿಯವ ನೀರು ಸರಬರಾಜು ಕಾಮಗಾರಿಯ ಗುತ್ತಿಗೆಯನ್ನು ಮೆ//ಎಸ್‌ಪಿಎಂಎಲ್ ಇನ್ಫ್ರಾ ಲಿಮಿಟೆಡ್, ನವ ದೆಹಲಿ ರವರಿಗೆ ದಿನಾಂಕ:17-12-2014 ರಂದು ರೂ.80.67 ಕೋಟಿಗೆ (ಕಾರ್ಯಚರಣೆ ಮತ್ತು ನಿರ್ವಹಣೆ ಮೊತ್ತ ರೂ.18.63 ಕೋಟಿಗಳು ಹೊರತುಪಡಿಸಿ) ಗುತ್ತಿಗೆ ನೀಡಲಾಗಿದೆ. ಪರಿಷ್ಕೃತ ಗುತ್ತಿಗೆ ಮೊತ್ತ ರೂ.96.48 ಕೋಟಿ (ಫೇಸ್-1). ಕಾಮಗಾರಿಗಳನ್ನು ಪೂರ್ಣಗೊಳಿಸಲು ಕರಾರಿನಂತೆ ದಿನಾಂಕ:16-06-2017 ಕ್ಕೆ ನಿಗದಿಪಡಿಸಲಾಗಿತ್ತು. ಈ ಯೋಜನೆಯಡಿ ಈ ಕೆಳಕಂಡ 2 ಮುಖ್ಯ ಕಾಮಗಾರಿಗಳು ಇರುತ್ತವೆ. |

**1. ಸಗಟು ನೀರು ಅಭಿವೃದ್ಧಿ ಕಾಮಗಾರಿಗಳು:**

| ಕ್ರ. ಸ. | ಕಾಮಗಾರಿ ವಿವರ | ಗುರಿ | ಪ್ರಗತಿ | ಬಾಕಿ |
|---|---|---|---|---|
| 1 | ಜಲಸಂಗ್ರಹಗಾರ (IR) | 1 | 95% | 5% (finishing works) |
| 2 | ಮೂಲ ಸ್ಥಾವರ | 1 | 100% | -- |
| 3 | ಯಂತ್ರೋಪಕರಣಗಳು | 2 ಸೆಟ್ | 100% | -- |
| 4 | 700 MM ವ್ಯಾಸದ BWSC Pipe (ಕಿ.ಮೀ) | 17.50 | 17.50 | -- |
| 5 | 10 MLD ಜಲ ಶುದ್ಧೀಕರಣಗಾರ | 1 | 95% | 5% (finishing works) |
| 6 | 500 MM to 250 MM DI Rising Main (km) | 18.31 | 18.31 | -- |
| 7 | ಮೇಲೆತ್ತರದ ಜಲಸಂಗ್ರಹಗಾರ (10LL – 3 nos. + 5LL – 2 nos.) | 5 | 5 | -- |

ಈ ಸಗಟು ಕುಡಿಯುವ ನೀರು ಕಾಮಗಾರಿಯ 2021 ರಲ್ಲಿ ಪೂರ್ಣಗೊಂಡಿದೆ. ಪ್ರಸ್ತುತ ನಗರಸಭೆ ವತಿಯಿಂದ ಕಾರ್ಯಚರಣೆ ಮತ್ತು ನಿರ್ವಹಣೆಯನ್ನು ನಿರ್ವಹಿಸಲಾಗುತ್ತಿದೆ.

**2. ವಿತರಣಾ ವ್ಯವಸ್ಥೆ:**

ನಗರವನ್ನು 7 ವಿತರಣಾ ವಲಯಗಳಾಗಿ ವಿಂಗಡಿಸಲಾಗಿದ್ದು, ವಿವರಗಳು ಈ ಕೆಳಕಂಡಂತಿದೆ.

| | | | | |
|---|---|---|---|---|
| 1 | ವಿತರಣಾ ಜಾಲ (ಹೆಚ್‌ಡಿಪಿಇ) ಕಿ.ಮೀ | | | |
| | ಸರಬರಾಜು | 206.07 | 206.07 | - |
| | ಜೋಡಣೆ | | 205.5 | 1.45 |
| | ಚಾಲನೆ | | 116.96 | 89.54 |
| 2 | ಮನೆ ಸಂಪರ್ಕ (ಸಂಖ್ಯೆ) | | | |
| | ಸರಬರಾಜು | 13946 | 13946 | - |
| | ಜೋಡಣೆ | | 12733 | 1213 |
| | ಚಾಲನೆ | | 8941 | 5005 |
| 3 | Valves (nos.) | 670 | 251 | 419 |
| 4 | Flowmeters (nos.) | 12 | 9 | 3 |
| 5 | Instrumentation (nos.) fixing & commissioning | 35 | 0 | 35 |

ಇದುವರೆಗೆ ಭೌತಿಕವಾಗಿ ಶೇ.85 ರಷ್ಟು ಕಾಮಗಾರಿ ಪೂರ್ಣಗೊಂಡಿದ್ದರೂ, ಅದರ ಬಳಕೆ ಶೇ.60 ರಷ್ಟು ಮಾತ್ರ ಉಪಯೋಗದಲ್ಲಿರುತ್ತದೆ. ಇದುವರೆಗೆ ರೂ.86.31 ಕೋಟಿ ವೆಚ್ಚ ಮಾಡಲಾಗಿದೆ.

ಗುತ್ತಿಗೆದಾರರ ವಿಳಂಬದಿಂದ ಗುತ್ತಿಗೆ ಅವಧಿಯನ್ನು 11 ಬಾರಿ ವಿಸ್ತರಿಸಿ, ಅಂತಿಮವಾಗಿ ದಿನಾಂಕ:30/04/2023 ರವರೆಗೆ ವಿಸ್ತರಿಸಲಾಗಿತ್ತು. ಆದರೂ ಗುತ್ತಿಗೆದಾರರು ಕಾಮಗಾರಿಯನ್ನು ಪೂರ್ಣಗೊಳಿಸಲು ವಿಫಲವಾಗಿರುತ್ತಾರೆ.

ಡಿಸಂಬರ್-2022 ರಿಂದ ಕಾಮಗಾರಿಯನ್ನು ಸ್ಥಗಿತಗೊಳಿಸಿದ ಕಾರಣ ಗುತ್ತಿಗೆ ಕರಾರನ್ನು ರದ್ದುಗೊಳಿಸಲು ದಿನಾಂಕ:27.06.2023 ರಂದು ಉದ್ದೇಶಿಸಿ ನೋಟೀಸು ಜಾರಿಗೊಳಿಸಿ ಬ್ಯಾಂಕ್ ಗ್ಯಾರಂಟಿಗಳನ್ನು ನಗದೀಕರಿಸಲು ಕ್ರಮವಹಿಸಲಾಗಿತ್ತು.

ದಿನಾಂಕ:13.07.2023 ರಂದು ಗುತ್ತಿಗೆದಾರರು ಸದರಿ ನೋಟೀಸ್ ಹಾಗೂ ಬ್ಯಾಂಕ್ ಗ್ಯಾರಂಟಿಗಳ ನಗಧೀಕರಿಸುವುದನ್ನು ಪ್ರಶ್ನಿಸಿ ಕೊಲ್ಕತ್ತಾ ನ್ಯಾಯಾಲಯದಲ್ಲಿ ತಡೆ ಆಜ್ಞೆ (Injunction Order) ತಂದಿರುತ್ತಾರೆ.

Principal City Civil Court, ಕೊಲ್ಕೊತ್ತದಲ್ಲಿ ನೀಡಿದ್ದ ತಡೆಯಾಜ್ಞೆಯನ್ನು ತೆರವುಗೊಳಿಸಲು ನುರಿತ ವಕೀಲರನ್ನು ನೇಮಿಸಿ, ಮೂಲ ದಾವೆಗೆ ಲಿಖಿತ ಹೇಳಿಕೆ ಹಾಗೂ ಅಂಶವಾರು ಆಕ್ಷೇಪಣೆಗಳನ್ನು ವ್ಯಕ್ತಪಡಿಸಿ ದಾವೆಯನ್ನು ಸೂಕ್ತವಾದ ದಾಖಲಾತಿಗಳೊಂದಿಗೆ ಪ್ರತಿವಾದ ಮಂಡನೆ ಮಾಡಲಾಯಿತು.

ಈ ಮಧ್ಯೆ ದಿನಾಂಕ:30.09.2023 ರಂದು ಗುತ್ತಿಗೆದಾರರು ಆರ್ಬಿಟ್ರೇಟರ್ ಅನ್ನು ನೇಮಕ ಮಾಡಲು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ (ಬೆಂಗಳೂರು) ಸಿವಿಲ್ ಮಿಸಲೇನಿಯಸ್ ಪಿಟಿಷನ್ ಅನ್ನು ಹೂಡಿರುತ್ತಾರೆ.

ಮಾನ್ಯ ಉಚ್ಚ ನ್ಯಾಯಾಲಯದ ಆದೇಶ - ಆರ್ಬಿಟ್ರೇಟರ್ ಅನ್ನು ನೇಮಕ ಮಾಡಿ ತಡೆ ಆಜ್ಞೆಯನ್ನು (Injunction Order) ಮುಂದುವರಿಸಿರುವುದು ಮತ್ತು ಗುತ್ತಿಗೆ ಕರಾರಿನಂತೆ, ಆರ್ಬಿಟರೇಷನ್ ನಿಯಮದ ರಿತ್ಯಾ ತಡೆ ಆಜ್ಞೆಯನ್ನು ಸೆಕ್ಷನ್ 17 ರ ಅಡಿಯಲ್ಲಿ ಪಡೆಯಲು ಗುತ್ತಿಗೆದಾರರಿಗೆ ಅರ್ಜಿಯನ್ನು ಆರ್ಬಿಟ್ರೇಟರ್ ರವರಿಗೆ ಸಲ್ಲಿಸಲು ದಿನಾಂಕ:29.02.2024 ರಂದು ಆದೇಶಿಸಲಾಗಿದೆ.

ಆರ್ಬಿಟ್ರೇಷನ್ ಪ್ರಗತಿಯಲ್ಲಿದ್ದು, ದಿನಾಂಕ 10.07.2024 ರಂದು 51ನೇ ಅಧಿಕಾರಯುತ ಸಮಿತಿ ಸಭೆಯಲ್ಲಿ ಸ್ಥಳೀಯ ಸಂಸ್ಥೆಯ ಬಾಕಿ ವಂತಿಕೆ ಮೊತ್ತ ಹಾಗೂ ಇತರೆ ಸ್ಥಳೀಯ ಸಂಸ್ಥೆಯ Fund ಬಳಸಿ ಕಾನೂನು ತಜ್ಞರ ಸಲಹೆ ಅನುಸಾರ ಬಾಕಿ ಕಾಮಗಾರಿಗಳನ್ನು ಸ್ಥಳೀಯ ಸಂಸ್ಥೆಯವರಿಂದ ಪೂರ್ಣಗೊಳಿಸಲು ಅನುಮೋದಿಸಿರುತ್ತಾರೆ.

ದಿನಾಂಕ 15.11.2024 ರಂದು ಅಂದಾಜು ಸಮಿತಿ ಸಭೆಯಲ್ಲಿ ಅಪೂರ್ಣ ಕಾಮಗಾರಿಗಳನ್ನು ಪೂರ್ಣಗೊಳಿಸಲು ತುರ್ತು ಕ್ರಮ ಜರುಗಿಸಲು ಹಾಗೂ ಈ ಸಂಬಂಧ Advocate General ರವರು ಸ್ವತಃ ಮುಂದಿನ ವಿಚಾರಣಾ ದಿನಾಂಕದಂದು ಹಾಜರಾಗಿ ಕುಡಿಯುವ ನೀರಿನ ಯೋಜನೆಗಳನ್ನು ಪೂರ್ಣಗೊಳಿಸಲು Arbitrator ರವರಿಂದ ಅನುಮತಿ ಪಡೆಯಲು ಸೂಚಿಸಿರುತ್ತಾರೆ.

ಈ ಮಧ್ಯೆ ಯೋಜನೆಯಡಿ ಅಳವಡಿಸಿ ಚಾಲನೆಯಾಗಿರುವ ಹೊಸ ವಿತರಣಾ ವ್ಯವಸ್ಥೆಯನ್ನು ಹಾಗೂ ಹಾಲಿ ಇರುವ ವಿತರಣಾ ವ್ಯವಸ್ಥೆಯನ್ನು ಉಪಯೋಗಿಸಿಕೊಂಡು ನೀರಿನ ಸೋರುವಿಕೆಯನ್ನು ತಡೆಗಟ್ಟಿ, ನೀರಿನ ವಿತರಣೆಯಲ್ಲಿ ಹೆಚ್ಚಿನ ಕಾರ್ಯಕ್ಷಮತೆಯೊಂದಿಗೆ ಸೋರಿಕೆ ಪ್ರಮಾಣ ಕಡಿಮೆ ಮಾಡಿ ಒಟ್ಟಾರೆ ಸೇವಾ ಅಭಿವೃದ್ಧಿ ಉಪಯೋಗಕ್ಕೆ ತರಲು ಸ್ಥಳೀಯ ಸಂಸ್ಥೆಯ ಕಾರ್ಯಾಚರಣೆ ಮತ್ತು ನಿರ್ವಹಣೆ ವ್ಯವಸ್ಥೆಯಡಿ ಕ್ರಮ ವಹಿಸಲಾಗುತ್ತಿತ್ತು.

| | | |
|---|---|---|
| | | ಅಂದಾಜು ಸಮಿತಿಯ ತೀರ್ಮಾನದಂತೆ, ಮಧ್ಯಂತರ ತಡೆಯಾಜ್ಞೆಯನ್ನು ತೆರವು ಮಾಡುವ ಬಗ್ಗೆ ಮತ್ತು ಬಾಕಿ ಕೆಲಸಗಳನ್ನು ಕೈಗೆತ್ತಿಕೊಳ್ಳುವ ಬಗ್ಗೆ ಅಡ್ವೊಕೇಟ್ ಜನರಲ್, (GOK) ರವರು ಆರ್ಬಿಟ್ರೇಟರ್ ರವರ ಮುಂದೆ ಹಾಜರಾಗಿ ಸುಮಾರು 5 ಬಾರಿ ವಾದ ಮಂಡಿಸಿರುತ್ತಾರೆ.<br>ದಿನಾಂಕ:25/06/2025 ಆರ್ಬಿಟ್ರೇಟರ್ ರವರಿಂದ ಬಾಕಿ ಕಾಮಗಾರಿಗಳನ್ನು ಬೇರೆ ಗುತ್ತಿಗೆದಾರರಿಂದ ಕೈಗೆತ್ತಿಗೊಳ್ಳಲು ಅನುಮತಿ ನೀಡಿರುತ್ತಾರೆ (Without Termination, without BG encashment and Claims & Counter Claims kept open till disposal).<br>ದಿನಾಂಕ 10/07/2024 ರಂದು ನಡೆದ ಅಧಿಕಾರಯುತ ಸಮಿತಿ ತೀರ್ಮಾನದಂತೆ ಹಾಗೂ ದಿನಾಂಕ 25/06/2025 ರಂದು ಬಾಕಿ ಕಾಮಗಾರಿಗಳನ್ನು ಕೈಗೊಳ್ಳಲು ಆರ್ಬಿಟ್ರೇಟರ್ ರವರು ಅನುಮತಿ ನೀಡಿರುವಂತೆ ಬಾಕಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ನಿಯಮಾನುಸಾರ ಕ್ರಮ ವಹಿಸಲು ನಗರಸಭೆಗೆ ದಿನಾಂಕ:23/07/2025 ರಂದು ಪತ್ರ ಬರೆಯಲಾಗಿದೆ. |
| ಆ) | ಸಿಂಧನೂರು ನಗರದ ಜನತೆಯ ಬಹು ನಿರೀಕ್ಷಿತ ಕನಸಿನ ಯೋಜನೆಯಾದ 24/7 ಯಾವಾಗ ಪ್ರಾರಂಭಿಸಲಾಗುವುದು? | ದಿನಾಂಕ:10/07/2024 ರಂದು ನಡೆದ ಅಧಿಕಾರಯುತ ಸಮಿತಿ ತೀರ್ಮಾನದಂತೆ ಹಾಗೂ ದಿನಾಂಕ:25/06/2025 ಆರ್ಬಿಟ್ರೇಟರ್ ರವರಿಂದ ಬಾಕಿ ಕಾಮಗಾರಿಗಳನ್ನು ಬೇರೆ ಗುತ್ತಿಗೆದಾರರಿಂದ ಕೈಗೆತ್ತಿಗೊಳ್ಳಲು ಅನುಮತಿ ನೀಡಿರುವಂತೆ (Without Termination, without BG encashment and Claims & Counter Claims kept open till disposal). ಈ ಯೋಜನೆಯಡಿ ಲಭ್ಯವಿರುವ ಅನುದಾನ ಹಾಗೂ ನಗರಸಭೆಯಿಂದ ಬರಬೇಕಾಗಿರುವ ಬಾಕಿ ವಂತಿಕೆಯೊಂದಿಗೆ ನಗರಸಭೆಯ ಇತರೆ ಸಂಪನ್ಮೂಲಗಳನ್ನು ಬಳಸಿಕೊಂಡು ಸಿಂಧನೂರು ನಗರದ 24x7 ಯೋಜನೆಯ ಬಾಕಿ ಕಾಮಗಾರಿಗಳನ್ನು ನಿಯಮಾನುಸಾರ ಕೈಗೆತ್ತಿಕೊಳ್ಳಲು ನಗರಸಭೆಗೆ ತಿಳಿಸಲಾಗಿದೆ. |

ಕಡತ ಸಂಖ್ಯೆ:ನಅಇ 143 ಪಿಆರ್‌ಜೆ 2025

(ಬಿ. ಎಸ್. ಸುರೇಶ)
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು